## ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 646/2012

ಫ್ರಾಸಾ : 12
ಚಾಸಾ : 13

| | | |
|---|---|---|
| ಹೆಸರು | : | ನಾಗರಾಜಪ್ಪ |
| ತಂದೆಯ ಹೆಸರು | : | ಚಿನ್ನಪ್ಪ |
| ಪ್ರಾಯ | : | 40 ವರ್ಷ |
| ಉದ್ಯೋಗ | : | ಮುಖ್ಯ ಪೇದೆ, ಬೆಳ್ತಂಗಡಿ ಠಾಣೆ |
| ವಾಸಸ್ಥಳ | : | ಬೆಳ್ತಂಗಡಿ |

ದಿನಾಂಕಃ 29/08/2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ನಾನು 2008 ರಿಂದ 2014 ವರೆಗೆ ವಿಟ್ಲ ಪೊಲೀಸು ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 18/05/2012 ರಂದು ವಿಟ್ಲ ಪೊಲೀಸು ಠಾಣೆಯಲ್ಲಿ ದಾಖಲಾದ ಅಪರಾಧ ಕ್ರ.89/2012 ರಲ್ಲಿ ಆರೋಪಿಯ ಪತ್ತೆ ಬಗ್ಗೆ ವಿಶೇಷ ಕರ್ತವ್ಯಕ್ಕಾಗಿ ವಿಟ್ಲ ಪೋಲಿಸ್ ಠಾಣಾ ಚಾಸಾ 27 ಪಿ ಎಸ್ ಐ, ಎ ಕೆ ರಕ್ಷಿತ್ ರವರ ಜೊತೆ ಚಾಸಾ 12 ಮತ್ತು ನನ್ನನ್ನು, ಪೋಲಿಸ್ ವೃತ್ತ ನಿರೀಕ್ಷಕರು ನೇಮಕ ಮಾಡಿ ಆದೇಶ ಮಾಡಿದರು.

3. ಪುತ್ತೂರು ಕಸಬಾ ಗ್ರಾಮದ, ಪುತ್ತೂರು ದರ್ಬೆಯಲ್ಲಿರುವ ಹೋಟೇಲ್ ಸಾಗರ್ ಬಳಿ ಪ್ರಕರಣದ ಮೃತ 1 ನೇ ಆರೋಪಿ ದಿನೇಶ್ ಪೂಜಾರಿ ಇರುವುದಾಗಿ ಬಂದ ಖಚಿತ ವರ್ತಮಾನದ ಮೇರೆಗೆ ಇಲಾಖಾ ಜೀಪಿನಲ್ಲಿ ನಾವುಗಳು ಬೆಳಿಗ್ಗೆ 8.15 ಗಂಟೆ ಸಮಯದಲ್ಲಿ ಸದರಿ ಸ್ಥಳ ತಲುಪಿದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಹೋಟೆಲ್ ಸಾಗರ ಬಳಿ ಇರುವ ಮಣ್ಣಿನ ರಸ್ತೆಯಲ್ಲಿ ಬೈಕನ್ನು ನಿಲ್ಲಿಸಿ ಪಕ್ಕದಲ್ಲಿ ನಿಂತಿದ್ದ ಮೃತ 1 ನೇ ಆರೋಪಿ ದಿನೇಶ್ ಪೂಜಾರಿಯು ತಪ್ಪಿಸಿಕೊಂಡು ಓಡಲು ಪ್ರಯತ್ನಿಸಿದಾಗ ಬಿದ್ದನು. ನಾವುಗಳು ಮೂರು ಜನರು ಆತನನ್ನು ಹಿಡಿದುಕೊಂಡೆವು. ಪಿ ಎಸ್ ಐ ಚಾಸಾ 27 ರವರು ಆತನ ಬಳಿ ವಿಚಾರಿಸಿದಾಗ ತನ್ನ ಹೆಸರು ದಿನೇಶ್ ಪೂಜಾರಿ ಎಂದು ತಿಳಿಸಿದನು.

4. ಆತನನ್ನು ವಿಚಾರಿಸಿದಾಗ ದಿಃ15/05/2012ರಂದು ಬಂಟ್ವಾಳ ತಾಲೂಕು ಕುಳಾ ಗ್ರಾಮದ ಕೊಂತ್ಯಟ್ಟು ಎಂಬಲ್ಲಿ ತನ್ನ ಬಾಬ್ತು ಮೋಟಾರು ಸೈಕಲ್ ಸಂ.ಕೆಎ-21-ಎಲ್-9699 ನ್ನು ಅಬು ಚಾಪಲ ಎಂಬುವವನು ಚಲಾಯಿಸುತ್ತಿದ್ದು ತಾನು ಸಹ ಸವಾರನನ್ನಾಗಿ ಕುಳ್ಳಿರಿಸಿಕೊಂಡು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಹೋಗುತ್ತಿರುವ ಸಮಯ ನಡೆದುಕೊಂಡು ಹೋಗುತ್ತಿದ್ದ ಹೆಂಗಸೊಬ್ಬರ ಕುತ್ತಿಗೆಗೆ ಕೈ ಹಾಕಿ ಕರಿಮಣಿ ಸರವನ್ನು ಕಿತ್ತು ಹೋಗಿರುತ್ತೇವೆ ಮತ್ತು ಸದರಿ ಕರಿಮಣಿ ಸರ ತನ್ನ ಬಳಿ ಇರುವುದಾಗಿ ತಪ್ಪು ಒಪ್ಪಿಕೊಂಡನು. ಪಿ ಎಸ್ ಐ ರವರು ಪಂಚರಾದ ಪುಷ್ಪರಾಜ್ ಮತ್ತು ಶರಣಪ್ಪ ಗೌಡರವರನ್ನು ಬರಮಾಡಿಕೊಂಡು ಪಂಚರ ಸಮಕ್ಷಮ ದಿನೇಶ್ ಪೂಜಾರಿಯ ಸೊಂಟದ ಒಳ ಕಿಸೆಯಿಂದ ತುಂಡಾಗಿದ್ದ ಎರಡು ಎಳೆಯ ಕರಿಮಣಿ ಸರವನ್ನು ತೆಗೆದು ತೋರಿಸಿದನು. ಸದರಿ ಸರವನ್ನು ಪ್ಲಾಸ್ಟಿಕ್ ತೊಟ್ಟೆಯಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ಮತ್ತು ಮೋಟಾರು ಸೈಕಲ್ ಸಂ.ಕೆಎ-21-ಎಲ್-9699 ನ್ನು ಸ್ವಾಧೀನಪಡಿಸಿಕೊಂಡು ಸ್ಥಳ ಮಹಜರ್ ಕ್ರಮ ಜರುಗಿಸಲಾಯಿತು. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿಯು ಮೃತ ರಾಗಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀಮತಿ ಎಸ್.ಪಿ. ವಕೀಲರಿಂದಃ</u>

1. ಅಬು ಚಾಪಲ್ ರವರನ್ನು ನಾನು ಎಲ್ಲಿಯೂ ನೋಡಿಲ್ಲ. ಚಾಸಾ 27 ರವರ ಜೊತೆ ನಾನು ಯಾವುದೇ ಆರೋಪಿ ಪತ್ತೆ ಕಾರ್ಯಕ್ಕೆ ಹೋಗಿಲ್ಲ ಮತ್ತು ಯಾವುದೇ ಆರೋಪಿತರನ್ನು ವಶಕ್ಕೆಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ